# ತುತ್ತೂರಿ

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು.

ತನಗೇ ತುತ್ತೂರಿ ಇದೆ ಎಂದು
ಬೇರಾರಿಗೂ ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ.


ತುತ್ತೂರಿ ಊದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ


ಸರಿಗಮ ಊದಲು ನೋಡಿದನು
ಗ, ಗ, ಗ, ಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು

ತುತ್ತೂರಿ ಬಣ್ಣವು ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು.

**-ಜಿ.ಪಿ. ರಾಜರತ್ನಂ**

ಕಲೆ: ದರ್ಶನ್ ವಿ.





# ಸರಿಗಮ – ಗಗಗಗ

ಮಕ್ಕಳ ಪದ್ಯ ಎಂದ ತತಕ್ಷಣವೆ ನನ್ನ ಕಣ್ಮುಂದೆ ಬರುವುದು ಯಾವಾಗಲೂ ಎರಡು ಪದ್ಯಗಳು. ಅವೆರಡೂ ಐವತ್ತು ವರ್ಷಗಳ ಹಿಂದೆ ಶಾಲೆಯಲ್ಲಿ ನಮಗೆ ಪಾಠವಾಗಿದ್ದವು. ಒಂದು ಜಿ.ಪಿ. ರಾಜರತ್ನಂ ಅವರ 'ಬಣ್ಣದ ತಗಡಿನ ತುತ್ತೂರಿ'. ಇನ್ನೊಂದು, ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ದಿನಕರ ದೇಸಾಯಿ ಅವರ 'ಬೆಕ್ಕೆ ಬೆಕ್ಕೆ ಮುದ್ದಿನ ಸೊಕ್ಕೆ'.

ಇವೆರಡೂ ಪದ್ಯಗಳು ಪುಸ್ತಕದಲ್ಲಿದ್ದ ಅವುಗಳ ಚಿತ್ರಸಮೇತ ಕಣ್ಣಲ್ಲಿವೆ. ಜಂಭದ ಕಸ್ತೂರಿಯ ಅರಿಸಿನ ಬಣ್ಣದಂಗಿ, ಕಂದು ಚೆಡ್ಡಿ. ಅವನ ತುತ್ತೂರಿಯ ಮೂರು ಪಟ್ಟೆಯ ಬಣ್ಣ, ನೀಲಿ ಹಳದಿ, ಕೆಂಪು. ಹಾಗೇ ಬೂದಿ ಬಣ್ಣದ ಬೆಕ್ಕು ಮತ್ತು ಪರದೆ ಇಳಿಬಿಟ್ಟಿದ್ದ